# ದಕ್ಷ

## ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಹಾಗೂ ಆಡಳಿತ ಪರಿಶೀಲನೆ ಕುರಿತು
## ಸಂಕ್ಷಿಪ್ತ ವರದಿ

**ಅವಧಿ : ಜೂನ್ 2008 - ನವೆಂಬರ್ 2009**

**ಡಿಸೆಂಬರ್ 2009**

ದಕ್ಷ ಸಂಸ್ಥೆಯು ನೋಂದಾಯಿತ ನಾಗರಿಕ ಸಮಾಜ ಸಂಸ್ಥೆಯಾಗಿದ್ದು, ಪ್ರಜಾಪ್ರಭುತ್ವ, ಆಡಳಿತ ಹಾಗೂ ಸಮಾನತೆಗೆ ಸಂಬಂಧಿಸಿದಂತೆ ನಾಗರಿಕರ ಹಿತರಕ್ಷಣೆಗೆ ಬದ್ಧವಾಗಿದೆ.

(www.dakshindia.org)

ಸಂಪರ್ಕಿಸಿ :

harish@dakshindia.org

## ಒಳನೋಟ

**1. ಪರಿಚಯ**

**2. ವಿಧಾನಸಭೆಯ ಕಲಾಪಗಳಲ್ಲಿ ಸದಸ್ಯರ ಕಾರ್ಯನಿರ್ವಹಣೆ**

**3. ಆಡಳಿತ, ನೀತಿ ಹಾಗೂ ಕಾರ್ಯಕ್ರಮಗಳ ಪರಿಶೀಲನೆ**

**4. ನಾಗರಿಕರ ದೃಷ್ಟಿಯಲ್ಲಿ ಆಯಾ ವಿಷಯಗಳ ಮಹತ್ವ ಹಾಗೂ ಚುನಾಯಿತ ಪ್ರತಿನಿಧಿಗಳ ಕಾರ್ಯನಿರ್ವಹಣೆ : ಒಂದು ಸಮೀಕ್ಷೆ**

**5. ಮನ್ನಣೆ**

# ಪರಿಚಯ

ರಾಜ್ಯಮಟ್ಟದಲ್ಲಿ ಪ್ರಜಾಪ್ರಭುತ್ವದ ರಚನೆ ಹಾಗೂ ಪ್ರಕ್ರಿಯೆಗಳನ್ನು ಅರಿಯುವ ನಿಟ್ಟಿನಲ್ಲಿ ನಾಗರಿಕ ಸಮಾಜ ಸಂಸ್ಥೆಯಾದ ದಕ್ಷ ಈ ಪರಿಶೀಲನೆಯನ್ನು ಕೈಗೊಂಡಿದೆ. ನಾಗರಿಕರು ಜಾಗೃತ ಹಾಗೂ ಕ್ರಿಯಾಶೀಲರಾಗಿದ್ದು , ಚುನಾಯಿತ ಸರ್ಕಾರದ ಕಾರ್ಯವನ್ನು ಪ್ರಶ್ನಿಸುವ ಸಾಮರ್ಥ್ಯ ಹೊಂದಿದಾಗ ಮಾತ್ರ ನೈಜ ಪ್ರಜಾಸತ್ತೆಯ ಉಳಿವು ಸಾಧ್ಯ. ಜೂನ್ 2008 ರಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದ ಒಟ್ಟಾರೆ ಕಾರ್ಯನಿರ್ವಹಣೆಯ ಮೇಲೆ ಬೆಳಕು ಚೆಲ್ಲುವ ಈ ಸಂಕ್ಷಿಪ್ತ ವರದಿ, ಜೂನ್ 2008ರಿಂದ ನವೆಂಬರ್ 2009ರ ಅವಧಿಯಲ್ಲಿನ ವಿಷಯಗಳನ್ನು ಒಳಗೊಂಡಿದೆ.

ಮಾಹಿತಿ ಹಕ್ಕು ಕಾಯಿದೆಯ ಮೂಲಕ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ವಾರ್ಷಿಕ ವರದಿ, ಪತ್ರಿಕಾ ವರದಿ ಹಾಗೂ ಸರ್ಕಾರೇತರ ಸಂಸ್ಥೆಗಳ ವರದಿಗಳಿಂದ ಮಾಹಿತಿ ಕಲೆ ಹಾಕಿ ಈ ವರದಿಯನ್ನು ತಯಾರಿಸಲಾಗಿದೆ.

ನಾಗರಿಕರು ಈ ವರದಿಯನ್ನು ಓದಿ, ವಿವರಗಳನ್ನು ವಿನಿಮಯಿಸಿಕೊಳ್ಳಬೇಕು ಎಂಬುದು ನಮ್ಮ ಆಶಯ. ವಿಸ್ತೃತ ವರದಿ ದಕ್ಷ ವೆಬ್‌ಸೈಟ್‌ನಲ್ಲಿ ಲಭ್ಯ (www.dakshindia.org)

ಈ ಸಂಕ್ಷಿಪ್ತ ವರದಿಯಲ್ಲಿ ಮೂರು ವಿಭಾಗಗಳಿವೆ.

1. ಶಾಸನ ಸಭೆಯಲ್ಲಿ ಶಾಸಕರ ಕಾರ್ಯನಿರ್ವಹಣೆಯ ಪರಿಶೀಲನೆ
2. ಸರ್ಕಾರದ ನೀತಿ, ಕಾರ್ಯಕ್ರಮಗಳು ಹಾಗೂ ಆಡಳಿತ ಪರಿಶೀಲನೆ
3. ನಾಗರಿಕರ ದೃಷ್ಟಿಯಲ್ಲಿ ಆಯಾ ವಿಷಯಗಳ ಮಹತ್ವ ಹಾಗೂ ಚುನಾಯಿತ ಪ್ರತಿನಿಧಿಗಳ ಕಾರ್ಯನಿರ್ವಹಣೆ : ಒಂದು ಸಮೀಕ್ಷೆ

# ಸದನದಲ್ಲಿ ಶಾಸಕರ ಕಾರ್ಯನಿರ್ವಹಣೆ

ಶಾಸನಸಭೆಯ ಕಾರ್ಯವೈಖರಿ ಹಾಗೂ ಶಾಸನಸಭೆಗೆ, ತನ್ಮೂಲಕ ಪ್ರಜಾಸತಾತ್ಮಕ ವಿಧಿವಿಧಾನಗಳಿಗೆ ಪ್ರತ್ಯೇಕ ಸದಸ್ಯರ ಕೊಡುಗೆಯನ್ನು ಅರಿಯುವ ನಿಟ್ಟಿನಲ್ಲಿ ದಕ್ಷ ಸಂಸ್ಥೆಯು ಸದನದಲ್ಲಿ ಶಾಸಕರ ಹಾಜರಿ, ಅವರು ಕೇಳಿದ ಪ್ರಶ್ನೆಗಳು ಹಾಗೂ ಚರ್ಚೆಗಳನ್ನು ಕುರಿತು ಮಾಹಿತಿ ಸಂಗ್ರಹಿಸಿದೆ. ಪರಿಶೀಲನೆಯ ಪ್ರಮುಖ ಅಂಶಗಳು ಹೀಗಿವೆ :

ಜುಲೈ 2009ರ ವರೆಗೆ ಸದನದ ಮೂರು ಅವಧಿವೇಶನಗಳು ಒಟ್ಟು 46 ದಿನಗಳ ಕಾಲ ನಡೆದಿವೆ. ಇದಲ್ಲದೇ ಸೆಪ್ಟಂಬರ್ 2009 ರಲ್ಲಿ ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸಲು ವಿಶೇಷ ಅಧಿವೇಶನ ನಡೆಸಲಾಯಿತು. ಈ ವಿಶೇಷ ಕಲಾಪದಲ್ಲಿ ಸದಸ್ಯರ ಹಾಜರಿ ಕುರಿತು ಮಾಹಿತಿ ನಮಗೆ ಲಭ್ಯವಾಗಿಲ್ಲ. ಸದನದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳ ಬಗ್ಗೆ ಫೆಬ್ರವರಿ 2009ರ ವರೆಗೆ ಮಾತ್ರ ಮಾಹಿತಿ ನಮಗೆ ದೊರೆತಿದೆ.

ಸದನವು ಮೂವತ್ತಕ್ಕಿಂತ ಕಡಿಮೆ ಶಾಸನಗಳನ್ನು ಪರಿಗಣಿಸಿ ಅಂಗೀಕರಿಸಿದೆ. ಇದರಲ್ಲಿ ಹೆಚ್ಚಿನವು ಹಣಕಾಸು ವಿಷಯಕ್ಕೆ ಸಂಬಂಧಿಸಿದ್ದು, ಶಾಸನರೂಪದಲ್ಲಿ ಯಾವುದೇ ಮಹತ್ತರ ನೀತಿ ಸುಧಾರಣೆಗಳು ಆಗಿಲ್ಲ.

ಜುಲೈ 2009ರ ವರೆಗೆ ಸದನದಲ್ಲಿ ಶಾಸಕರ ಹಾಜರಾತಿ ದಾಖಲೆಗಳು (www.dakshindia.org) ವೆಬ್‌ಸೈಟಿನಲ್ಲಿ ಲಭ್ಯ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸದಸ್ಯರ ಹಾಜರಾತಿಯು ಸದನದ ಆಗು ಹೋಗುಗಳನ್ನು ಸೂಕ್ತವಾಗಿ ಪ್ರತಿಫಲಿಸುವುದಿಲ್ಲ. ವಿವಾದ ಸೃಷ್ಟಿಸುವ, ಕೋಲಾಹಲ ಹುಟ್ಟಿಸುವ ವಿಷಯಗಳ ಚರ್ಚೆ ಬಂದಾಗ ಮಾತ್ರ ಕಿಕ್ಕಿರಿದು ತುಂಬುವ ಸದನವು, ಇತರ ಸಮಯಗಳಲ್ಲಿ ಹೆಚ್ಚು ಕಡಿಮೆ ಖಾಲಿ ಇರುತ್ತದೆ. ಎಷ್ಟೋ ಸಲ ಸದಸ್ಯರು ಒಂದೇ ಒಂದು ನಿಮಿಷ ಸದನದ ಸಭೆಯಲ್ಲಿ ಕಾಲಿಟ್ಟು, ನಂತರ ಹೊರನಡೆದು ಕಣ್ಮರೆಯಾಗಿ ಬಿಡುತ್ತಾರೆ. ಆದರೆ ಹಾಜರಿ ಹಾಕುವುದನ್ನು ಮಾತ್ರ ಮರೆಯುವುದಿಲ್ಲ. ಪರಿಣಾಮ, ಸದನವು ದಿನವುದ್ದಕ್ಕೂ ಖಾಲಿ ಖಾಲಿ, ಹಾಜರಿ ಮಾತ್ರ ನೂರಕ್ಕೆ ನೂರು. ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಸಭಾಪತಿ ಹಾಗೂ ಉಪಸಭಾಪತಿ ಇವರ ಹಾಜರಾತಿಯನ್ನಂತೂ ದಾಖಲಿಸಲಾಗುವುದೇ ಇಲ್ಲ.

ಉಳಿದಂತೆ ಶಾಸಕರ ಹಾಜರಾತಿ ಗಮನಿಸುವುದಾದರೆ, ಈ ಪೈಕಿ 12 ಜನ ನೂರಕ್ಕೆ ನೂರು ಹಾಜರಾತಿ ದಾಖಲಿಸಿದ್ದು, 132 ಸದಸ್ಯರು 75 ಪ್ರತಿಶತ, 32 ಸದಸ್ಯರು 50 ರಿಂದ 75 ಪ್ರತಿಶತ ಹಾಗೂ 9 ಸದಸ್ಯರು 50 ಪ್ರತಿಶತಕ್ಕಿಂತ ಕಡಿಮೆ ಹಾಜರಿ ಹಾಕಿದ್ದಾರೆ. ಮೂವರು ಶಾಸಕರಂತೂ 15 ಕ್ಕೂ ಕಡಿಮೆ ದಿನ ಹಾಜರಾಗಿದ್ದಾರೆ.

ಇನ್ನು, ಸದನದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳ ವಿಚಾರ. ಒಟ್ಟು 46 ದಿನಗಳ ಅವಧಿಯಲ್ಲಿ 78 ಶಾಸಕರು (ದಾಖಲೆಗಳು ಲಭ್ಯವಿರುವ ಶಾಸಕರ ಪೈಕಿ ಶೇ 40 ಶಾಸಕರು) ಒಂದೇ ಒಂದು ಪ್ರಶ್ನೆ ಕೇಳಿಲ್ಲ. 31 ಶಾಸಕರು ತಲಾ 5 ಕ್ಕಿಂತ ಕಡಿಮೆ ಪ್ರಶ್ನೆ ಕೇಳಿದ್ದಾರೆ. ಕೇವಲ 35 ಶಾಸಕರು ತಲಾ 20 ಅಥವಾ ಅದಕ್ಕಿಂತ ಹೆಚ್ಚು ಪ್ರಶ್ನೆ ಕೇಳಿದ್ದು, ಈ ಪೈಕಿ 9 ಸದಸ್ಯರು ಮಾತ್ರ 50 ಕ್ಕಿಂತ ಹೆಚ್ಚು ಪ್ರಶ್ನೆ ಕೇಳಿದ್ದಾರೆ. ನೂರಕ್ಕಿಂತ ಹೆಚ್ಚು ಪ್ರಶ್ನೆ ಕೇಳಿದವರೆಂದರೆ ಒಬ್ಬರೇ ಒಬ್ಬ ಶಾಸಕರು !

# ಆಡಳಿತ ನೀತಿ ಹಾಗೂ ಕಾರ್ಯಕ್ರಮಗಳ ಪರಿಶೀಲನೆ

ಸರ್ಕಾರದ ಕೆಲವು ನೀತಿ, ಕಾರ್ಯಕ್ರಮಗಳು ಹಾಗೂ ವಿಧಿವಿಧಾನಗಳನ್ನು ಈ ವಿಭಾಗವು ಒಳಗೊಂಡಿದ್ದು, ಜನಸಾಮಾನ್ಯರ ಮೇಲೆ ಸರ್ಕಾರದ ಆಡಳಿತದ ಪರಿಣಾಮವನ್ನು ಮೌಲ್ಯಮಾಪನ ಮಾಡುತ್ತದೆ. ದಾಖಲೆಗಳ ಆಧಾರದ ಮೇಲೆ ಸರ್ಕಾರದ ಕಾರ್ಯ ನಿರ್ವಹಣೆಯನ್ನು ಪ್ರಶ್ನೋತ್ತರ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ.

## ಈ ಅವಧಿಯಲ್ಲಿ ಬಿಜೆಪಿ ಸರ್ಕಾರದ ಪ್ರಮುಖ ಸಾಧನೆಗಳೇನು ?

1. ಒಟ್ಟು 43 ಹೊಸ ತಾಲೂಕು ಹಾಗೂ ಒಂದು ಹೊಸ ಜಿಲ್ಲೆ (ಯಾದಗಿರಿ)ಯ ರಚನೆಗೆ ಮಂಜೂರಾತಿ. ಆಡಳಿತ ವಿಕೇಂದ್ರೀಕರಣ ನಿಟ್ಟಿನಲ್ಲಿ ಇದೊಂದು ಮಹತ್ತರ ನಿರ್ಧಾರವಾಗಿದೆ. ಗುಲ್ಬರ್ಗಾ ಜಿಲ್ಲೆಯಿಂದ ಬೇರ್ಪಡಿಸಿ ಯಾದಗಿರಿ ಜಿಲ್ಲೆಯ ರಚನೆಯಾಗಬೇಕು ಎಂಬುದು ಬಹುಕಾಲದ ಬೇಡಿಕೆಯಾಗಿತ್ತು. ಈ ಹೊಸ ಜಿಲ್ಲೆಯ ರಚನೆ ಹಾಗೂ ಹಣಕಾಸು ಸೌಲಭ್ಯ ಪೂರೈಕೆಯಿಂದ ಆರ್ಥಿಕವಾಗಿ ಹಿಂದುಳಿದ ಈ ಭಾಗದ ಅಭಿವೃದ್ಧಿ ಅವಶ್ಯವಾಗಿ ಆಗಬೇಕಿದೆ.

2. ಡಿ.ಎಮ್. ನಂಜುಂಡಪ್ಪ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಹಾಗೂ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗಳ ಉಸ್ತುವಾರಿಗಾಗಿ ಉನ್ನತ ಮಟ್ಟದ ಸಮಿತಿಯ ರಚನೆ

3. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹುಬ್ಬಳ್ಳಿ ಹಾಗೂ ಗುಲ್ಬರ್ಗಾಗಳಲ್ಲಿ ಹೆಚ್ಚುವರಿ ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಸಲಹಾ ಕೇಂದ್ರಗಳ ಸ್ಥಾಪನೆ

4. ಹೋಬಳಿ ಹಾಗೂ ಹಳ್ಳಿಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 'ಜನ ಸ್ಪಂದನ' ಕಾರ್ಯಕ್ರಮದ ಅನುಷ್ಠಾನ. ಈ ಕಾರ್ಯಕ್ರಮದ ರೂಪುರೇಷೆಯ ಪ್ರಕಾರ ಪ್ರತಿ ತಿಂಗಳು ಕೊನೆಯ ಶನಿವಾರ ಅಭಿವೃದ್ಧಿ ಕಾರ್ಯಗಳು ಹಾಗೂ ಜನರ ಕುಂದುಕೊರತೆಗಳನ್ನು ಚರ್ಚಿಸಿ ಅವಶ್ಯ ಕ್ರಮ ಕೈಗೊಳ್ಳಬೇಕು. ಇದು ಕೆಲವು ಭಾಗಗಳಲ್ಲಿ ಮಾತ್ರ ಜಾರಿಯಾಗಿದ್ದು, ಈ ಕಾರ್ಯಕ್ರಮವನ್ನು ಎಲ್ಲ ಹೋಬಳಿಗಳಿಗೆ ವಿಸ್ತರಿಸುವ ಅವಶ್ಯಕತೆ ಇದೆ.

5. ಬೆಂಗಳೂರಿನಲ್ಲಿ ತಿರುವಳ್ಳುವರ ಹಾಗೂ ಚೆನ್ನೈನಲ್ಲಿ ಸರ್ವಜ್ಞಮೂರ್ತಿಯ ಸ್ಥಾಪನೆ. ಇದು ಎರಡು ರಾಜ್ಯದ ಹಾಗೂ ಭಾಷೆಗಳ ನಡುವಣ ಸಾಮರಸ್ಯಕ್ಕೆ ಸರ್ಕಾರದ ಮಹತ್ತರ ಕೊಡುಗೆಯಾಗಿದೆ.

6. ಸರ್ವಶಿಕ್ಷಣ ಅಭಿಯಾನಕ್ಕೆ ಹೆಚ್ಚಿನ ಅನುದಾನ. 2009-10ರ ಬಜೆಟ್‌ನಲ್ಲಿ ಸರ್ಕಾರವು ಈ ಯೋಜನೆಗೆ ರೂ. 16, 613 ಲಕ್ಷ ನಿಗದಿಪಡಿಸಿದೆ.

7. ಪ್ರೌಢಶಾಲಾ ಮಟ್ಟದವರೆಗೆ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಿಕೆ.

8. ಸಮಾಜ ಕಲ್ಯಾಣ ಇಲಾಖೆಗೆ ಅನುದಾನದ ಮೊತ್ತವನ್ನು ಹೆಚ್ಚಿಸಿದ್ದು ಅದರಂತೆ ರಾಜ್ಯ ಸರ್ಕಾರವೂ ಇಲಾಖೆಯನ್ನು ಬಲಪಡಿಸಿ 12 ಹೊಸ ಕಾರ್ಯಕ್ರಮಗಳನ್ನು ಘೋಷಿಸಿದೆ. ಸುಮಾರು 5000 ವಸತಿಗೃಹಗಳ ಉಸ್ತುವಾರಿ ನಿರ್ವಹಿಸಲು ಹಾಸ್ಟೆಲ್ ವ್ಯವಸ್ಥಾಪನೆ ಸೌಲಭ್ಯ ಕಲ್ಪಿಸಿ, ಉತ್ತಮ ವಸತಿಗೃಹ ಪ್ರಶಸ್ತಿಯನ್ನು ಅನುಷ್ಠಾನಗೊಳಿಸಲಾಗಿದೆ.

9. ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಚಾಲನೆ. ಹಲವಾರು ವರ್ಷಗಳಿಂದ ಪೂರ್ಣಾವಧಿ ಶಿಕ್ಷಕರ ನೇಮಕಾತಿ ಸ್ಥಗಿತಗೊಂಡಿದ್ದ ಹಿನ್ನೆಲೆಯಲ್ಲಿ ಇದೊಂದು ಗಮನಾರ್ಹ ಸಾಧನೆಯಾಗಿದೆ.

## ಹಣಕಾಸು ವಿತರಣೆಯಲ್ಲಿ ಸರ್ಕಾರದ ಆದ್ಯತೆಗಳೇನು ?

ಕೃಷಿಗೆ ವಿಶೇಷ ಒತ್ತು ನೀಡುವುದಾಗಿ ಬಿಜೆಪಿ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಆದರೆ ಅದರಂತೆ ಕೃಷಿ, ಗ್ರಾಮೀಣ ಹಾಗೂ ಸಾಮಾಜಿಕ ವಲಯದ ಅವಶ್ಯಕತೆಗಳಿಗೆ ಆದ್ಯತೆ ನೀಡುತ್ತಿಲ್ಲ, ಬದಲಾಗಿ, ನಗರ ಪ್ರದೇಶಗಳ ಅಭಿವೃದ್ಧಿ ಹಾಗೂ ವಾಣಿಜ್ಯ ವಲಯಗಳಿಗೆ ಅಧಿಕ ಹಣಕಾಸು ನಿಗದಿಪಡಿಸಲಾಗಿದೆ.

ಬಿಜೆಪಿ ಸರ್ಕಾರವು ತನ್ನ ಪ್ರಥಮ ಪೂರ್ಣಾವಧಿ ಬಜೆಟ್ (2009-10)ದಲ್ಲಿ ಈ ಕೆಳಗಿನಂತೆ ಹಣಕಾಸು ಹಂಚಿಕೆ ಮಾಡಿದೆ.

1. ನಗರ ಹಾಗೂ ಗ್ರಾಮೀಣ ಹಣಕಾಸು ಹಂಚಿಕೆ

ಗ್ರಾಮೀಣಾಭಿವೃದ್ಧಿಗೆ (ರೂ. 1,070 ಲಕ್ಷ) ಒಟ್ಟು ಹಣಕಾಸು ಯೋಜನೆಯ 4 ಪ್ರತಿಶತ.

ನಗರಾಭಿವೃದ್ಧಿಗೆ (ರೂ. 4,162.40 ಲಕ್ಷ) ಯೋಜನೆಯ 16 ಪ್ರತಿಶತ

ಕೃಷಿ ಹಾಗೂ ಸಂಬಂಧಪಟ್ಟ ಯೋಜನೆಗಳಿಗೆ (ರೂ. 1,517.21 ಲಕ್ಷ) ಯೋಜನೆಯ 6 ಪ್ರತಿಶತ.

ಸಾರಿಗೆ ಕ್ಷೇತ್ರಕ್ಕೆ (ರೂ. 3,758.70 ಲಕ್ಷ) ಯೋಜನೆಯ 14 ಪ್ರತಿಶತ.

ಕಳೆದ ಬಜೆಟ್‌ಗಿಂತ ಈ ಸಲದ ಬಜೆಟ್‌ನಲ್ಲಿ ಅತಿ ಹೆಚ್ಚು ಹಣಕಾಸು ಹಂಚಿಕೆ ದೊರೆತಿರುವುದು ವಾಣಿಜ್ಯ ಹಾಗೂ ಉದ್ಯಮ ವಲಯಕ್ಕೆ (ಶೇ. 136.9 ಹೆಚ್ಚಳ )

2 ಮೂಲಭೂತ ಸೌಕರ್ಯಗಳು : ಸರ್ಕಾರವು ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಅತಿ ಹೆಚ್ಚಿನ ಒತ್ತು ಕೊಟ್ಟಿರುವುದರಿಂದ, ಬೆಂಗಳೂರು ನಗರಕ್ಕೆ ಇತರ ಎಲ್ಲಾ ಪ್ರದೇಶಗಳಿಗಿಂತ ಅಧಿಕ ಹಣಕಾಸು ಹಂಚಿಕೆಯಾಗಿದೆ :

★ ಮೊನೊ ರೈಲು : ಸುಮಾರು ರೂ. 4,000 ಕೋಟಿ

★ ಮೆಟ್ರೊ ಹಂತ 1 : ಸುಮಾರು ರೂ. 14,000 ಕೋಟಿ

★ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಲು ಉದ್ದೇಶಿಸಿರುವ 51 ಕಿ.ಮೀ. ಹೊರ ವರ್ತುಲ ರಸ್ತೆಗೆ ಸುಮಾರು ರೂ. 8,000 ಕೋಟಿ

★ ಉದ್ದೇಶಿತ ಫೆರಿಫೆರಲ್ ರಸ್ತೆ ನಿರ್ಮಾಣಕ್ಕೆ (ಭೂ ಸ್ವಾಧೀನ ವೆಚ್ಚವು ಸೇರಿ) ರೂ. 5000 ಕೋಟಿ

★ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಗೆ ರೂ. 1,000 ಕೋಟಿ

★ ರಾಜ್ಯದಲ್ಲಿ ಮೂಲಭೂತ ಸೌಕರ್ಯ ನಿರ್ಮಾಣಕ್ಕಾಗಿ ರೂ. 1,00,000 ಕೋಟಿ ಒದಗಿಸಲಾಗುವುದು ಎಂದು ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ ನವಂಬರ್ 27, 2009 ರಂದು ಘೋಷಿಸಿದೆ.

3. ವಾಣಿಜೀಕೃತ ಸಾರ್ವಜನಿಕ - ಖಾಸಗಿ ಸಹಭಾಗಿತ್ವ( PPP )ಕ್ಕೆ ಹೆಚ್ಚಿನ ಆದ್ಯತೆ :

ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ಜೂನ್ 2007 ರಲ್ಲಿ PPP ಕೇಂದ್ರದ ಸ್ಥಾಪನೆಯಾಯಿತು. ಜೂನ್ 2008ರಲ್ಲಿ ಹೊಸ ಸರ್ಕಾರದ ಆಡಳಿತ ಆರಂಭವಾದಾಗ ರೂ. 6,000 ಕೋಟಿ ಮೌಲ್ಯದ 39 ಸಾರ್ವಜನಿಕ - ಖಾಸಗಿ ಸಹಭಾಗಿತ್ವ ಯೋಜನೆಗಳು ಅಸ್ತಿತ್ವದಲ್ಲಿದ್ದವು . ನವೆಂಬರ್ 2008 ರಲ್ಲಿ ರೂ. 109,329 ಕೋಟಿ ಮೊತ್ತದ ಇನ್ನೂ 166 ಯೋಜನೆಗಳನ್ನು

ಕೈಗೊಳ್ಳುವುದಾಗಿ ಸರ್ಕಾರ ಪ್ರಕಟಿಸಿತು. ಈ ಯೋಜನೆಗಳು ಎಷ್ಟರ ಮಟ್ಟಿಗೆ ನಿರೀಕ್ಷಿತ ಫಲಿತಾಂಶ ನೀಡುತ್ತವೆ ಎಂಬುದನ್ನು ಕಾಯ್ದು ನೋಡಬೇಕು.

4. ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳ ಖಾಸಗಿ ಜೀವನಶೈಲಿಗಾಗಿ ಮಾಡಿರುವ ವೆಚ್ಚ : ಬಿಜೆಪಿ ಸರ್ಕಾರವು ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳ ಮನೆಗಳ ನವೀಕರಣಕ್ಕಾಗಿ 10 ಕೋಟಿ ರೂಪಾಯಿ ಮಂಜೂರು ಮಾಡಿತು.

★ ಮುಖ್ಯಮಂತ್ರಿಗಳ ಮನೆ : ರೂ. 1.7 ಕೋಟಿ

★ ಗೃಹ ಸಚಿವ ವಿ.ಎಸ್. ಆಚಾರ್ಯ : ರೂ. 61.3 ಲಕ್ಷ

★ ಸಭಾಪತಿ ಜಗದೀಶ ಶೆಟ್ಟರ್ : ರೂ. 24.83 ಲಕ್ಷ

★ ಶೋಭಾ ಕರಂದ್ಲಾಜೆ , ; ಮಾಜಿ ಸಚಿವೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ : ರೂ. 38.05 ಲಕ್ಷ

★ ಕರುಣಾಕರ ರೆಡ್ಡಿ, ಕಂದಾಯ ಇಲಾಖೆ : ರೂ. 88.26 ಲಕ್ಷ

5. ಚೀನಾಕ್ಕೆ ರೈತರ ಭೇಟಿ : ಚೀನಾದ ಕೃಷಿ ವಿಧಾನಗಳನ್ನು "ವೀಕ್ಷಿಸಿ ತರಬೇತಿ ಪಡೆಯಲು" ಒಟ್ಟು 633 ರೈತರನ್ನು ರೂ. 423.79 ಲಕ್ಷ ವೆಚ್ಚದಲ್ಲಿ ಚೀನಾ ಪ್ರವಾಸಕ್ಕೆ ಕಳುಹಿಸಲಾಯಿತು.

## ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಎಷ್ಟು ಭದ್ರವಾಗಿದೆ ?

ಮಂಗಳೂರು ಹಾಗೂ ಮೈಸೂರಿನಲ್ಲಿ ಕೋಮು ಗಲಭೆಗಳು ಸಂಭವಿಸಿದ್ದಲ್ಲದೇ, ಬಿಜೆಪಿ ಸರ್ಕಾರದ ಮೊದಲ 18 ತಿಂಗಳು ಅವಧಿಯಲ್ಲಿ ಅಲ್ಲಲ್ಲಿ ಭೀತಿ, ಬೆದರಿಕೆ ಒಡ್ಡುವ ಹಾಗೂ ಮಾನವ ಹಕ್ಕುಗಳಿಗೆ ಚ್ಯುತಿ ತರುವ ಘಟನೆಗಳು ಉಂಟಾಗಿವೆ.

1. ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ತಿಂಗಳಲ್ಲಿ, ರಸಗೊಬ್ಬರ ಕೊರತೆಯನ್ನು ವಿರೋಧಿಸಿ ರೈತರು ಪ್ರತಿಭಟಿಸುತ್ತಿದ್ದ ಸಂದರ್ಭದಲ್ಲಿ ಹಾವೇರಿಯಲ್ಲಿ ಪೊಲೀಸರು ಗೋಲಿಬಾರ್ ನಡೆಸಿದರು. ಅದರಲ್ಲಿ ಒಬ್ಬ ರೈತ ಮೃತ ಪಟ್ಟ ಘಟನೆಗೆ ಸಂಬಂಧಿಸಿ ವಿಚಾರಣ ಆಯೋಗವನ್ನು ರಚಿಸಲಾಗಿದ್ದು, ಆಯೋಗದ ಅಂತಿಮ ವರದಿ ಇನ್ನು ಬಿಡುಗಡೆಯಾಗಿಲ್ಲ.

2. ಮಾನವ ಹಕ್ಕು ಕಾರ್ಯಕರ್ತರ ಮೇಲೆ ದೌರ್ಜನ್ಯ : ಅಕ್ಟೋಬರ್ 20, 2009ರಂದು ಐವರು ಹಿಜರಾಗಳ ಕಾನೂನುಬಾಹಿರ ಬಂಧನವನ್ನು ಪ್ರಶ್ನಿಸಿದ ಕೆಲವು ಲೈಂಗಿಕ ಅಲ್ಪಸಂಖ್ಯಾತ ಕಾರ್ಯಕರ್ತರ ಮೇಲೆ ಸುಳ್ಳು ಆರೋಪ ಹೊರಿಸಿದ ಪೋಲೀಸರು ಅವರನ್ನು ಬಂಧಿಸಿ ದೌರ್ಜನ್ಯವೆಸಗಿದರು. ಇದನ್ನು ವಿರೋಧಿಸಿ ಶಾಂತಿಯುತ ಮೆರವಣಿಗೆ ನಡೆಸಿದ ಹಲವಾರು ಮಾನವ ಹಕ್ಕು ಕಾರ್ಯಕರ್ತರನ್ನು ಕೂಡ ಸುಳ್ಳು ಆರೋಪದ ಮೇಲೆ ಬಂಧಿಸಲಾಯಿತು.

3. 'ಸಭೆ ಹಾಗೂ ಮೆರವಣಿಗೆ ಪರವಾನಿಗೆ ಹಾಗೂ ನಿಯಂತ್ರಣ (ಬೆಂಗಳೂರು) ಆದೇಶ, 2008' ಅಧಿಸೂಚನೆಯನ್ನು ಬೆಂಗಳೂರು ಪೊಲೀಸರು ಹೊರಡಿಸಿದ್ದಾರೆ. ಜನರು ಸಭೆ ಸೇರುವುದು ಹಾಗೂ ಮೆರವಣಿಗೆ ನಡೆಸುವುದನ್ನು ಪರವಾನಿಗೆ ಮೂಲಕ ನಿಯಂತ್ರಿಸಲು ಉದ್ದೇಶಿಸಿರುವ ಈ ಅಧಿಸೂಚನೆ ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಕಾನೂನು ಹಾಗೂ ವ್ಯವಸ್ಥೆಗೆ ಭಂಗ ತರುವ ಸಮಸ್ಯೆ ಎಂದು ಪರಿಗಣಿಸುತ್ತದೆ.

4. ಚರ್ಚ್‌ಗಳ ಮೇಲೆ ದಾಳಿ : ಸೆಪ್ಟಂಬರ್ ಹಾಗೂ ಅಕ್ಟೋಬರ್ 2008 ರಲ್ಲಿ ಹಲವಾರು ಚರ್ಚ್‌ಗಳ ಮೇಲೆ ದಾಳಿ ಮಾಡಲಾಯಿತು. ಜನವರಿ 1, 2009ರಲ್ಲಿ ಮಳೆಬೆನ್ನೂರು ಗ್ರಾಮದ ಚರ್ಚ್ ಮೇಲೆ ದಾಳಿ ಮಾಡಿ ಸಂಪೂರ್ಣವಾಗಿ ಸುಟ್ಟುಹಾಕಲಾಯಿತು. ಪುನಃ ಅಕ್ಟೋಬರ್ 2009 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಂದು ಚರ್ಚ್ ದಾಳಿಗೆ ಗುರಿಯಾಯಿತು.

5. ಸೆಪ್ಟಂಬರ್ 2008ರ ವೇಳೆಯ ಚರ್ಚ್‌ಗಳ ಮೇಲೆ ನಡೆದ ದಾಳಿಯ ಹಿಂದೆ ಬಜರಂಗ ದಳದ ಕೈವಾಡವಿದೆ ಎಂದು ವರದಿ ಮಾಡಿದ್ದ ಕರಾವಳಿ ಅಲೆ ಪತ್ರಿಕೆಯು, ಬಜರಂಗ ದಳ ಸೇರಿದಂತೆ ಬಲಪಕ್ಷದ ಜೊತೆ ಸಹಯೋಗ ಹೊಂದಿದ ಸಂಸ್ಥೆಗಳ ಕೆಂಗಣ್ಣಿಗೆ ಗುರಿಯಾಯಿತು.

6. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಬಾ ಬುಡನ್‌ಗಿರಿ ದೇವಸ್ಥಾನದ ಸುತ್ತ ಮುತ್ತ ಗೈರು ಕಾನೂನು ಚಟುವಟಿಕೆಗಳಲ್ಲಿ ತೊಡಗಿದ್ದಕ್ಕೆ ಸಂಬಂಧಿಸಿ ಬಜರಂಗ ದಳ, ವಿಶ್ವ ಹಿಂದು ಪರಿಷದ್, ಬಿಜೆಪಿ ಹಾಗೂ ಶ್ರೀರಾಮ ಸೇನೆಯ ವಿರುದ್ಧ ದಾಖಲಿಸಿದ್ದ ಪ್ರಕರಣಗಳನ್ನು ಡಿಸೆಂಬರ್ 2008 ರಲ್ಲಿ ಹಿಂದೆಗೆಯಲಾಯಿತು.

7. ಸರ್ವೋಚ್ಚ ನ್ಯಾಯಾಲಯದ ಆದೇಶದ ಉಲ್ಲಂಘನೆ (ಡಿಸೆಂಬರ್ 2008) : ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ ದತ್ತ ದೇವಸ್ಥಾನ ಆವರಣದಲ್ಲಿ ಪೂಜೆ ನಡೆಸಕೂಡದು ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಸರ್ಕಾರವು ಪೂಜೆಗೆ ಅನುಮತಿ ನೀಡಲು ನಿರ್ಧರಿಸಿರುವುದರಿಂದ ಅಲ್ಲಿ ಕಾನೂನು ವ್ಯವಸ್ಥೆಗೆ ಧಕ್ಕೆಯಾಗುವ ಹಾಗೂ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡುವ ಪರಿಸ್ಥಿತಿ ನಿರ್ಮಾಣವಾಗಿದೆ.

## ಪ್ರಜಾಸತ್ತಾತ್ಮಕ ರಚನೆ ಹಾಗೂ ವಿಧಿ ವಿಧಾನಗಳಿಗೆ ಮನ್ನಣೆ ಕೊಡಲಾಗಿದೆಯೇ ?

1. ಲೋಕಾಯುಕ್ತಕ್ಕೆ ಸೂಕ್ತ ಅಧಿಕಾರದ ಕೊರತೆಯಿದ್ದು, ಈ ಕೊರತೆಯನ್ನು ತುಂಬಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಲೋಕಾಯುಕ್ತ ಬಲೆಗೆ ಬಿದ್ದ ಭ್ರಷ್ಟ ಅಧಿಕಾರಿಗಳ ಪ್ರಕರಣಗಳ ಪೈಕಿ ಹೆಚ್ಚಿನವು ದುರ್ಲಕ್ಷ್ಯಕ್ಕೀಡಾಗಿವೆ ಹಾಗೂ ಅಂತಹ ಅಧಿಕಾರಿಗಳಿಗೆ ಶಿಕ್ಷೆಯಾಗಿಲ್ಲ.

2. ಕರ್ನಾಟಕ ರಾಜ್ಯ ಮಾನವ ಹಕ್ಕು ಸಮಿತಿ ಸೂಕ್ತವಾಗಿ ಕಾರ್ಯನಿರ್ವಹಿಸಲು ಸರ್ಕಾರ ಅನುಕೂಲ ಒದಗಿಸಿಲ್ಲ. ಸಮಿತಿಗೆ ಪ್ರತ್ಯೇಕ ಕಛೇರಿ ಇಲ್ಲ, ಹಣಕಾಸು ಹಾಗೂ ಸಿಬ್ಬಂದಿಯ ಕೊರತೆ ಇದೆ.

3. ಜವಾಹರಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಕಾರ್ಯಕ್ರಮದಡಿಯಲ್ಲಿ (JNNURM) ಕೈಗೊಂಡಿರುವ ಮೂಲಭೂತ ಸೌಕರ್ಯ ಯೋಜನೆಗಳು ಹಾಗೂ ಅವುಗಳ ಪರಿಣಾಮ ಕುರಿತು ವಿವರಗಳನ್ನು ಸಾದರ ಪಡಿಸುವಲ್ಲಿ ಸರ್ಕಾರ ಯಾವುದೇ ವಿಶೇಷ ಪ್ರಯತ್ನ ಮಾಡಿಲ್ಲ.

4. ಬೆಂಗಳೂರಿನಲ್ಲಿ ಗೈರು ಕಾನೂನು ಹಾಗೂ ಒತ್ತುವರಿ ಕಟ್ಟಡಗಳನ್ನು ನೆಲಸಮಗೊಳಿಸುವಂತಹ ಕ್ರಮಗಳನ್ನು ಎಷ್ಟೋ ಸಲ, ಅದರಲ್ಲೂ ಬಡ ಜನರು ವಾಸಿಸುವ ಹಾಗೂ ಕೊಳಚೆ ಪ್ರದೇಶಗಳಲ್ಲಿ ಸೂಕ್ತ ಮುನ್ನೆಚ್ಚರಿಕೆ ನೀಡದೇ ಕೈಗೊಳ್ಳಲಾಗಿದೆ. ಇದಲ್ಲದೇ ಒತ್ತುವರಿಯನ್ನು ಕಾನೂನು ಬದ್ಧಗೊಳಿಸುವ ಅಕ್ರಮ - ಸಕ್ರಮ ಯೋಜನೆಯನ್ನು ಜಾರಿಗೆ ತರುವ ಮುನ್ನ, ನಗರ ಯೋಜನೆ ಹಾಗೂ ಆಡಳಿತದ ಮೇಲೆ ಅದರ ಪರಿಣಾಮ ಕುರಿತು ಸರ್ಕಾರ ಸೂಕ್ತ ಚಿಂತನೆ ನಡೆಸಿಲ್ಲ.

5. ಸಂಬಂಧಪಟ್ಟ ವಿಧಿವಿಧಾನಗಳನ್ನು ಗಣನೆಗೆ ತೆಗೆದುಕೊಳ್ಳದೇ ಸರ್ಕಾರ ಎಲ್ಲ ಲಿಂಗಾಯತ ಉಪಜಾತಿಗಳನ್ನು ಹಿಂದುಳಿದ ವರ್ಗ ಎಂದು ಘೋಷಿಸಲು ಎರಡು ಬಾರಿ ಪ್ರಯತ್ನಿಸಿ, ತೀವ್ರ ಟೀಕೆಗೆ ಗುರಿಯಾಗಿ ಆದೇಶವನ್ನು ಹಿಂತೆಗೆದುಕೊಳ್ಳಬೇಕಾಯಿತು.

6. ನೆರೆ ಪರಿಹಾರ ಕಾರ್ಯದ ಅಂಗವಾಗಿ ಮನೆಗಳನ್ನು ಕಟ್ಟುವ ಯೋಜನೆಗಳಿಗಾಗಿ ಕಂಪನಿಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸರ್ಕಾರ ಪಾರದರ್ಶಕತೆ ತೋರಿಸಿಲ್ಲ.

7. ಅದೇ ರೀತಿ ಸಾವಯವ ಕೃಷಿ ಮಿಶನ್, ನೆರೆ ಪರಿಹಾರ ವಿತರಣೆ, ರೈತರ ಚೀನಾ ಪ್ರವಾಸ ಮುಂತಾದವು ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಸದಸ್ಯರ, ಏಜೆನ್ಸಿಗಳ ಆಯ್ಕೆ ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಕೊರತೆ ಇದೆ.

8. ಮಾಹಿತಿ ಕಾಯ್ದೆ ಅಡಿಯಲ್ಲಿ ಸೂಕ್ತ ಮಾಹಿತಿ ನೀಡುವಲ್ಲಿಯೂ ಕರ್ನಾಟಕ ಇತರ ರಾಜ್ಯಗಳಿಗಿಂತ ಹಿಂದಿದೆ. ತೃಪ್ತಿದಾಯಕ ಮಾಹಿತಿ ನೀಡುವಲ್ಲಿ ಕರ್ನಾಟಕ 29% ಅಂಕ ಮಾತ್ರ ಗಳಿಸಿದ್ದು ರಾಜ್ಯಗಳ ಪಟ್ಟಿಯಲ್ಲಿ ಕೊನೆಯಿಂದ ಎರಡನೇ ಸ್ಥಾನದಲ್ಲಿದೆ.

## ರಾಜ್ಯದ ಒಟ್ಟಾರೆ ಆಡಳಿತ ಹಾಗೂ ಆಡಳಿತ ವಿಕೇಂದ್ರೀಕರಣದ (ಪಂಚಾಯತ್ ಹಾಗೂ ನಗರ ಪಾಲಿಕೆ) ಮೇಲೆ ಬಿಜೆಪಿ ಸರ್ಕಾರದ ಪರಿಣಾಮವೇನು?

1. ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಗಳೂ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಮೇಲಿಂದ ಮೇಲೆ ವರ್ಗಾವಣೆ ಮಾಡಿರುವುದರಿಂದ ಹಲವಾರು ಇಲಾಖೆಗಳು ಸೂಕ್ತವಾಗಿ ಕೆಲಸ ಮಾಡುತ್ತಿಲ್ಲ.

2. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿಯಲ್ಲಿ ವಿಳಂಬವಾಗಿದ್ದು, ಸರ್ಕಾರ ಈ ಕುರಿತು ನಿರ್ಧಾರ ಕೈಗೊಳ್ಳುವಲ್ಲಿ ವಿಫಲವಾಗಿದೆ. ಹಣಕಾಸು ಹಂಚಿಕೆ ಹಾಗೂ ಲೆಕ್ಕ ಪರಿಶೋಧನೆಯನ್ನು ಜನರೇ, ಖುದ್ದಾಗಿ, ಮುಕ್ತವಾಗಿ ಮಾಡಲು ಅವಕಾಶ ನೀಡುವ ಪಂಚಾಯತ್ ಜಮಾಬಂದಿ ಕಾರ್ಯಕ್ರಮವನ್ನು ಕೈಬಿಡಲಾಗಿದೆ.

3. ನ್ಯಾಯಾಲಯ ಹಾಗೂ ರಾಜ್ಯ ಚುನಾವಣಾ ಸಮಿತಿ ಮೂರು ಬಾರಿ ಜ್ಞಾಪಕ ಪತ್ರ ಕಳುಹಿಸಿದ್ದರೂ ಕೂಡ ಸರ್ಕಾರ ಇನ್ನೂವರೆಗೆ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಿಲ್ಲ. ABIDE ಗುಂಪು, 'ಬೆಂಗಳೂರು ಪ್ರದೇಶ ಆಡಳಿದ ಕಾಯ್ದೆ (2009) ' ಯ ಕರಡು ಪ್ರತಿ ತಯಾರಿಸಿ, ವೆಬ್‌ಸೈಟಿನಲ್ಲಿ ಪ್ರಕಟಿಸಿದೆ. ಆದರೆ ಈ ಕುರಿತು ಸಾರ್ವಜನಿಕ ಚರ್ಚೆಗಳು ಆಗಿಲ್ಲ.

## ಇತ್ತೀಚಿನ ವಿಕೋಪಗಳನ್ನು ಸರ್ಕಾರ ಯಾವ ರೀತಿ ನಿಭಾಯಿಸಿದೆ ?

2009ನೇ ವರ್ಷದಲ್ಲಿ ಗ್ರಾಮೀಣ ಕರ್ನಾಟಕ ಬಹುಶಃ ಹಿಂದೆಂದೂ ಕಂಡಿರದ ವಿಕೋಪಗಳನ್ನು ಎದುರಿಸಿತು.

ಬರ : 2009ರ ಬೇಸಿಗೆಯಿಂದ ಇಲ್ಲಿಯವರೆಗೆ 20 ಜಿಲ್ಲೆಗಳಲ್ಲಿ 86 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಜೂನ್ 1 ರಿಂದ ಮಳೆಯ ಅಭಾವ ಉಂಟಾಗಿ 16 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಬೆಳೆಹಾನಿಯ ಮೌಲ್ಯ ಸುಮಾರು ರೂ. 320,2 ಕೋಟಿ. ಸುಮಾರು ಅರವತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹಾಳಾಗಿವೆ. ಬರಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಅಲ್ಲಿನ ಜನ ನಿರುದ್ಯೋಗ, ಆಹಾರ ಅಭಾವ ಮುಂತಾದ ಸಂಕಷ್ಟಗಳನ್ನು ಇನ್ನೂ ಎದುರಿಸುತ್ತಿದ್ದಾರೆ. ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಚಿಂತಾಜನಕವಾಗಿದೆ.

ನೆರೆ : ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಈಶಾನ್ಯ ಕರ್ನಾಟಕದ ಬಹು ಪಾಲು ಪ್ರದೇಶ ಅತಿವೃಷ್ಠಿ ಹಾಗೂ ನೆರೆಹಾವಳಿಗೆ ತುತ್ತಾಯಿತು. 139 ಜನ ಮರಣವನ್ನಪ್ಪಿದರು. 350 ಹಳ್ಳಿಗಳಲ್ಲಿ 116,000 ಮನೆಗಳು ಹಾನಿಗೀಡಾದವು. ಅಪಾರ ಪ್ರಮಾಣದಲ್ಲಿ ಬೆಳೆ ಹಾನಿ, ದನಕರು ಹಾನಿ ಸಂಭವಿಸಿತು.

ನೆರೆ ಪರಿಹಾರಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದ್ದಲ್ಲದೇ, ಕರ್ನಾಟಕದ ಜನತೆ ಒಂದು ಸಾವಿರ ಕೋಟಿ ರೂಪಾಯಿ ದೇಣಿಗೆ ನೀಡಿದ್ದಾರೆಂದು ಮುಖ್ಯಮಂತ್ರಿ ಘೋಷಿಸಿದರು. ಆದರೆ, ವರದಿಗಳ ಪ್ರಕಾರ ನೆರೆ ಪರಿಹಾರ ಕಾರ್ಯಗಳು ಎಲ್ಲೂ ಸಮಾಧಾನಕರವಾಗಿ ಆಗಿಲ್ಲ. ನೆರೆಹಾವಳಿಗೆ ತುತ್ತಾದ ಪ್ರದೇಶಗಳಲ್ಲಿನ ಜನರ ಸ್ಥಿತಿಗತಿ ಸುಧಾರಿಸಲು ಶೀಘ್ರ ಕ್ರಮ ಕೈಗೊಳ್ಳಬೇಕೆಂದು ರಾಜ್ಯಪಾಲರು ಬಹಿರಂಗವಾಗಿ ಬಿಜೆಪಿ ಸರ್ಕಾರಕ್ಕೆ ಕರೆ ನೀಡಿದ್ದಾರೆ. ನೆರೆಪೀಡಿತ ಪ್ರದೇಶಗಳಲ್ಲಿ ಪರಿಹಾರ ಧನ ವಿತರಣೆಯಲ್ಲಿ ಸಮಸ್ಯೆಗಳು, ಪುನರ್ವಸತಿ ಕೇಂದ್ರಗಳ ಸ್ಥಾಪನೆಯಲ್ಲಿ ವಿಳಂಬ, ಪರಿಹಾರ ಕೇಂದ್ರಗಳಲ್ಲಿ ನೈರ್ಮಲ್ಯ ಹಾಗೂ ಸೌಲಭ್ಯಗಳ ಕೊರತೆ, ನಿರಾಶ್ರಿತರಿಗೆ ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ ನೀಡುವಲ್ಲಿ ವೈಫಲ್ಯಗಳನ್ನು ಕನ್ನಡ ವಿಶ್ವವಿದ್ಯಾಲಯ ವರದಿ ಮಾಡಿದೆ. ಅದರಲ್ಲೂ ದಲಿತ ವರ್ಗಕ್ಕೆ ಸೇರಿದ ಜನರು ವಿಪರೀತ ಕಷ್ಟನಷ್ಟ ಅನುಭವಿಸುತ್ತಿದ್ದಾರೆ.

## ಕೇಂದ್ರ ಸರ್ಕಾರದ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲಾಗಿದೆಯೇ ?

ಕೃಷಿಕರ ಹಾಗೂ ಗ್ರಾಮೀಣ ಜನರ ಸಂಕಷ್ಟಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ರಾಜ್ಯ ಸರ್ಕಾರ ಪರಿಣಾಮಕಾರಿಯಾಗಿ ಬಳಸಿಕೊಂಡಿಲ್ಲ ಹಾಗೂ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕರಿಗೆ ಸೂಕ್ತವಾಗಿ ಒದಗಿಸಿಲ್ಲ.

★ ಎನ್‌ಸಿಎಇಆರ್ (ನ್ಯಾಶನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕನಾಮಿಕ್ ರಿಸರ್ಚ್) ಹಾಗೂ ಪಿಐಎಫ್ (ಪಬ್ಲಿಕ್ ಇಂಟರೆಸ್ಟ್ ಫೌಂಡೇಶನ್)ನ ಇತ್ತೀಚಿನ ವರದಿಯ ಪ್ರಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಹಾಗೂ ಲೆಕ್ಕ ಪರಿಶೋಧನೆಯನ್ನು ಪರಿಗಣಿಸಿದಾಗ ಕರ್ನಾಟಕ ಇತರ ಎಲ್ಲ ರಾಜ್ಯಗಳಿಗಿಂತ ಹಿಂದುಳಿದಿದೆ.

★2008-09ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪಾಲ್ಗೊಳ್ಳಲು ಅರ್ಹತೆ ಹೊಂದಿದ ಕುಟುಂಬಗಳ ಪೈಕಿ ಇಪ್ಪತ್ತು ಪ್ರತಿಶತಕ್ಕೂ ಕಡಿಮೆ ಕುಟುಂಬಗಳು ನೂರು ದಿನಗಳ ಕೆಲಸ ಪಡೆದಿವೆ.

★ರಾಜ್ಯಕ್ಕೆ ರೂ. 637.96 ಕೋಟಿ ಹಂಚಿಕೆಯಾಗಿದ್ದರೂ ಕೂಡ, ಹಣದ ವಿನಿಯೋಗ ಸೂಕ್ತವಾಗಿ ಆಗಿಲ್ಲ. ಕೇವಲ ರೂ. 353 ಕೋಟಿ ಬಳಸಲಾಗಿದೆ.

★ಯೋಜನೆಯ ಲಾಭ ಪಡೆದುಕೊಳ್ಳುವ ಕುಟುಂಬಗಳ ಪ್ರಮಾಣವೂ ಕಡಿಮೆಯಾಗುತ್ತ ಬಂದಿದೆ. 2006-07 ರಲ್ಲಿ ಇದು ಶೇ. 58 ಇದ್ದರೆ, 2007-08ರಲ್ಲಿ ಶೇ 48 ಹಾಗೂ 2008 - 09 ರಲ್ಲಿ ಶೇ 40 ಕ್ಕೆ ಇಳಿದಿದೆ. (ಅಕ್ಟೋಬರ್ 2008ರ ವರೆಗೆ)

★ 2008-09 ರಲ್ಲಿ ಕರ್ನಾಟಕದಲ್ಲಿ ಕೇವಲ 29 ಲಕ್ಷ ಉದ್ಯೋಗ ಕಾರ್ಡ್ ವಿತರಿಸಲಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ. (ಮಧ್ಯ ಪ್ರದೇಶ 112 ಲಕ್ಷ , ಆಂಧ್ರ ಪ್ರದೇಶ 109 ಲಕ್ಷ ಹಾಗೂ ಉತ್ತರ ಪ್ರದೇಶ 102 ಲಕ್ಷ )

## ಯಾವ 'ದೂರದೃಷ್ಟಿ' ಯು ಸರ್ಕಾರದ ನೀತಿ, ಕಾರ್ಯಕ್ರಮಗಳಿಗೆ ಮಾರ್ಗದರ್ಶನ ನೀಡುತ್ತದೆ ?

ರಾಜ್ಯದ ಅಭಿವೃದ್ಧಿಯ ಉಸ್ತುವಾರಿ ವಹಿಸಲು ಕರ್ನಾಟಕ ವಿಶನ್ ಗ್ರುಪ್ ರಚಿಸಿದ್ದಲ್ಲದೇ , ಕೃಷಿ ಮಿಶನ್, ಕರ್ನಾಟಕ ಶಿಕ್ಷಣ ಮಿಶನ್, ಅಬೈಡ್ (ಅಜೆಂಡಾ ಫಾರ್ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಟಾಸ್ಕ್ ಫೋರ್ಸ್) ಸೇರಿದಂತೆ ಒಟ್ಟು 11 ಸಮಿತಿ, ಕಾರ್ಯಪಡೆಗಳನ್ನು ರಚಿಸಲಾಗಿದೆ. ಆದರೆ ಈ ಪೈಕಿ ಬಹುತೇಕ ಸಮಿತಿಗಳಲ್ಲಿ ಖಾಸಗಿ ಕಂಪನಿಗಳಿಗೆ ಹಾಗೂ ಬಿಜೆಪಿ ಹಾಗೂ ಅವರ ಪರಿವಾರದ ನಿಕಟವರ್ತಿಗಳಿಗೆ ಮಣೆ ಹಾಕಲಾಗಿದೆಯೇ ಹೊರತು ದಲಿತರಿಗೆ, ಕೃಷಿಕರಿಗೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ದೊರೆತಿಲ್ಲ.

## ಪರಿಸರ ರಕ್ಷಣೆಗೆ ಸಂಬಂಧಿಸಿ ಸರ್ಕಾರದ ಪಾತ್ರವೇನು ?

ಸರ್ಕಾರದ ಕಾರ್ಯವೈಖರಿಯು ಪರಿಸರಕ್ಕೆ ಸಂಬಂಧಿಸಿ ಹಲವಾರು ಆತಂಕಗಳನ್ನು ಸೃಷ್ಟಿಸಿದೆ.

1. ಬಳ್ಳಾರಿಯ ತಮತಿ ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಈ ವಿಷಯದಲ್ಲಿ ಲೋಕಾಯುಕ್ತರು ನೀಡಿದ ವರದಿಯ ಹೊರತಾಗಿಯೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

2. ರಸ್ತೆಗಳ ಅಗಲೀಕರಣ ಹಾಗೂ ಮೆಟ್ರೊ ರೈಲು ನಿರ್ಮಾಣ ಯೋಜನೆಗಳಿಗಾಗಿ ಬೆಂಗಳೂರು ನಗರದಲ್ಲಿ ಸಾವಿರಾರು ಗಿಡಮರ ಕಡಿಯಲಾಗಿದೆ. ಇದರಲ್ಲಿ ನಾಗರಿಕ ಹಿತಾಸಕ್ತಿ ಹಾಗೂ ಪರಿಸರ ಸಂರಕ್ಷಣೆಯನ್ನು ಸರ್ಕಾರ ಕಡೆಗಣಿಸಿದೆ.

3. ಹಾಸನ ಜಿಲ್ಲೆಯಲ್ಲಿ ಗುಂಡಿಯಾ ಜಲವಿದ್ಯುತ್ ಯೋಜನೆಯನ್ನು ಪರಿಸರ ಹಾಗೂ ಅರಣ್ಯ ಇಲಾಖೆಯ ಸಮ್ಮತಿ ಹಾಗೂ ಪ್ರಮಾಣ ಪತ್ರ ಪಡೆಯದೇ ಉದ್ಘಾಟಿಸಲಾಗಿದೆ.

## ನಾಗರಿಕರ ದೃಷ್ಟಿಯಲ್ಲಿ ಆಯಾ ವಿಷಯಗಳ ಪ್ರಾಮುಖ್ಯತೆ ಹಾಗೂ ಚುನಾಯಿತ ಪ್ರತಿನಿಧಿಗಳ ಕಾರ್ಯ ನಿರ್ವಹಣೆ : ಒಂದು ಸಮೀಕ್ಷೆ

ನಾಗರಿಕರ ದೃಷ್ಟಿಯಲ್ಲಿ ಪ್ರಮುಖವಾದ ವಿಷಯಗಳು ಯಾವವು ಹಾಗೂ ಶಾಸಕರ ಕಾರ್ಯನಿರ್ವಹಣೆ ಕುರಿತು ಅವರ ಅಭಿಪ್ರಾಯವೇನು ಎಂಬುದನ್ನು ಅರಿಯಲು ನಾವು ರಾಜ್ಯದ ಎಲ್ಲ 218 ವಿಧಾನಸಭಾ ಕ್ಷೇತ್ರಗಳಲ್ಲಿ ಸಮೀಕ್ಷೆ ನಡೆಸಿದ್ದೇವೆ. (ಇತ್ತೀಚೆಗೆ ಉಪ ಚುನಾವಣೆ ನಡೆದ 6 ಕ್ಷೇತ್ರಗಳನ್ನು ಹೊರತುಪಡಿಸಿ ).

ಅಕ್ಟೋಬರ್ ಹಾಗೂ ನವೆಂಬರ್ 2009 ರಲ್ಲಿ ನಡೆಸಿದ ಈ ಸಮೀಕ್ಷೆಯಲ್ಲಿ 8,000 ಕ್ಕೂ ಹೆಚ್ಚು ಜನರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು.

ವೈದ್ಯಕೀಯ ಸೌಲಭ್ಯ , ಶಿಕ್ಷಣ , ಮೂಲಭೂತ ಸೌಕರ್ಯ , ಆಡಳಿತ , ಉದ್ಯೋಗಾವಕಾಶ ಇತ್ಯಾದಿ ಕುರಿತು ಎರಡು ಮೂಲಭೂತ ಪ್ರಶ್ನೆಗಳನ್ನು ನಾಗರಿಕರಿಗೆ ಕೇಳಲಾಯಿತು.

ಅ. ಮತ ಚಲಾಯಿಸಬೇಕಾದ ಸಮಯದಲ್ಲಿ ಈ ವಿಷಯಗಳ ಪೈಕಿ ಯಾವುದು ನಾಗರಿಕರಿಗೆ ಅತ್ಯಂತ ಮಹತ್ವದ್ದಾಗಿತ್ತು ?

ಆ. ಈ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ಶಾಸಕರ ಕಾರ್ಯನಿರ್ವಹಣೆ ಕುರಿತು ನಾಗರಿಕರ ಅಭಿಪ್ರಾಯವೇನು ?

ವಿವಿಧ ವಿಷಯಗಳನ್ನು ಅವುಗಳ ಪ್ರಾಮುಖ್ಯತೆಯ ಆಧಾರ ಮೇಲೆ ಮಹತ್ವದ್ದು , ಮಹತ್ವದ್ದಲ್ಲ ಹಾಗೂ ಅತ್ಯಂತ ಮಹತ್ವದ್ದು ಎಂದು ವಿಂಗಡಿಸಿ, ಅದಕ್ಕೆ ಸಂಬಂಧಿಸಿದಂತೆ ಶಾಸಕರ ಕಾರ್ಯನಿರ್ವಹಣೆಯನ್ನು ಕಳಪೆ, ಸಾಧಾರಣ ಹಾಗೂ ಉತ್ತಮ ಎಂದು ಶ್ರೇಣಿ ನೀಡಲು ನಾಗರಿಕರಿಗೆ ಸೂಚಿಸಲಾಯಿತು.

ಸಮೀಕ್ಷೆಯ ಫಲಿತಾಂಶ :

1. ಶಾಸಕರಿಂದ ನಾಗರಿಕರ ನಿರೀಕ್ಷೆ ಹಾಗೂ ನಾಗರಿಕರ ದೃಷ್ಟಿಯಲ್ಲಿ ಶಾಸಕರ ಕಾರ್ಯನಿರ್ವಹಣೆ – ಈ ಎರಡರ ಮಧ್ಯೆ ಸಾಕಷ್ಟು ಅಂತರವಿದೆ . ರಾಜ್ಯಾದ್ಯಂತ ಶಾಸಕರ ಕಾರ್ಯನಿರ್ವಹಣೆ ಸೂಚಿ ಕೇವಲ 50% (5 ರಲ್ಲಿ 2.84 ಅಂಕ ಮಾತ್ರ) !

2. ಅತ್ಯಂತ ಮಹತ್ವದ ವಿಷಯಗಳಿಗೆ ಸಂಬಂಧಿಸಿ ಶಾಸಕರ ಕಾರ್ಯನಿರ್ವಹಣೆ :

ರಾಜ್ಯಾದ್ಯಂತ ಜನರಿಗೆ ಅತ್ಯಂತ ಮಹತ್ವದ್ದಾಗಿರುವ ವಿಷಯಗಳು ಹೀಗಿವೆ.

★ ವಿದ್ಯುತ್ ಪೂರೈಕೆ

★ ನೀರು ಪೂರೈಕೆ

★ ಉದ್ಯೋಗಾವಕಾಶ

★ ಉದ್ಯೋಗಕ್ಕಾಗಿ ತರಬೇತಿ

★ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ

★ ಶೈಕ್ಷಣಿಕ ಸೌಲಭ್ಯಗಳು

ಈ ವಿಷಯಗಳಲ್ಲಿ ಚುನಾಯಿತ ಪ್ರತಿನಿಧಿಗಳ ಕಾರ್ಯನಿರ್ವಹಣೆಗೆ ನಾಗರಿಕರು 5 ರಲ್ಲಿ 3.23 ಅಂಕ (60%) ನೀಡಿದ್ದಾರೆ. ಜನರು ನಗರವಾಸಿಗಳಾಗಿರಲಿ ಅಥವಾ ಹಳ್ಳಿಗಳಲ್ಲಿರಲಿ, ಅವರ ಆದ್ಯತೆಗಳು ಹಾಗೂ ಶಾಸಕರಿಂದ ಅವರ ನಿರೀಕ್ಷೆಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ . ಆದರೆ ಶಾಸಕರ ಕಾರ್ಯನಿರ್ವಹಣೆ ಕುರಿತು ಜನರ ಅಭಿಪ್ರಾಯವನ್ನು ಪರಿಗಣಿಸಿದಾಗ ನಗರ ಹಾಗೂ ಹಳ್ಳಿಗಳ ಮಧ್ಯೆ ಹಾಗೂ ಮುಂದುವರೆದ ಹಾಗೂ ಹಿಂದುಳಿದ ಜಿಲ್ಲೆಗಳ ಮಧ್ಯೆ ಗಮನಾರ್ಹ ವ್ಯತ್ಯಾಸವಿದೆ.

3. ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳು :

ನಾಗರಿಕರ ನಿರೀಕ್ಷೆ ಹಾಗೂ ಅವರ ದೃಷ್ಟಿಯಲ್ಲಿ ರಾಜಕೀಯ ಪಕ್ಷಗಳ ಕಾರ್ಯನಿರ್ವಹಣೆಯ ಮಧ್ಯದ ಅಂತರ ಎಲ್ಲ ಮೂರು ಪ್ರಮುಖ ಪಕ್ಷಗಳಿಗೆ ಏಕ ಪ್ರಕಾರವಾಗಿದೆ. ನಾಗರಿಕರ ದೃಷ್ಟಿಯಲ್ಲಿ ಪಕ್ಷೇತರ ಅಭ್ಯರ್ಥಿಗಳ ಕಾರ್ಯನಿರ್ವಹಣೆ ಇತರ ಅಭ್ಯರ್ಥಿಗಳಿಗಿಂತ ಉತ್ತಮ ಎಂದು ಸಮೀಕ್ಷೆ ಸೂಚಿಸುತ್ತದೆ.

ಸಮೀಕ್ಷೆಯ ವಿಸ್ತೃತ ವರದಿ www.dakshindia.org ಯಲ್ಲಿ ಲಭ್ಯ. ಈ ಮೇಲ್ harish@dakshindia.org; kishore@dakshindia.org

# ಮನ್ನಣೆ

ಈ ವರದಿ ತಯಾರಿಸಲು ನೆರವಾದವರಿಗೆಲ್ಲ ದಕ್ಷ ಸಂಸ್ಥೆಯು ಕೃತಜ್ಞತೆ ಸಲ್ಲಿಸುತ್ತದೆ.

ಹರೀಶ್ ನರಸಪ್ಪ harish@dakshindia.org

ಕಿಶೋರ್ ಮಂಡ್ಯಮ್ kishore@dakshindia.org

ವಾಸವಿ ಎ.ಆರ್. arvasavi@gmail.com

ಅನಿಲ್ ಸೂರಜ್

ಅರ್ಚನಾ ಮೆಹಂದಾಳೆ

ಅರವಿಂದ ನಾರಾಯಣ್

ಬಾಪು ಹೆದ್ದೂರ್ ಶೆಟ್ಟಿ

ಸಿ. ವೀರಭದ್ರ ನಾಯಕ್

ಚಂದನ ಗೌಡ

ಎಚ್.ಡಿ. ಪ್ರಶಾಂತ

ಕೆ.ಸಿ.ರಘು

ಕೌಶಲ್ಯ ಮಿಶ್ರಾ

ಲಲಿತಾ ಕಾಮತ್

ಮೀರಾ

ರಜನೀಶ್ ಡೇಕಾ

ಸತೀಶ್

ಸನಮ್ ರೂಹಿ

ಸಿಂಧೂ ನಾಯಕ್

ಸುಶುಮ್ನಾ ಕನ್ನನ್

ತ್ರಿಲೋಚನ್ ಶಾಸ್ತ್ರಿ

ವಾಸುದೇವ ಶರ್ಮಾ

****